ಜನರ ವಂನಸ್ಸಿಗೆ ನೋವು ಉಂಟುಮಾಡತಕ್ಕಂಥ, ಸರ್ಕಾರಕ್ಕೆ ನಷ್ಟ ಉಂಟುಮಾಡಿಕೊಂಡು ಮಾಡತಕ್ಕ ಈ ಕಾರ್ಯಕ್ರಮ ಏನಿದೆ ಇದಕ್ಕೆ ಚಳುವಳಿ ಪ್ರಾರಂಭವಾಗಿದೆ. ಈ ಚಳುವಳಿ ಎಲ್ಲಿಗೆ ನಿಲ್ಲುತ್ತದೆ ಎನ್ನತಕ್ಕಂಥ ಅಭಿಪ್ರಾಯ ನಿಮಗೆ ತಪ್ಪು ಕಲ್ಪನೆ ಇರಬಹುದು. ಇದರ ಹಿನ್ನೆಲೆಯಲ್ಲಿ ಬಹಳ ಗಂಭೀರ ಪರಿಸ್ಥಿತಿಗೆ ಹೋಗಬಹುದು. ಇದನ್ನು ಯಾವುದೆ ಜನಪ್ರತಿನಿಧಿ ಸ್ವಾಗತ ಮಾಡಲಿಕ್ಕೆ ಸಿದ್ಧರಿಲ್ಲ. ಲೋಕಸಭಾಸದಸ್ಯರು, ಶಾಸಕರು, ಮಂಡಲ ಪ್ರಧಾನರುಗಳು ಜಿಲ್ಲಾ ಪರಿಷತ್ ಸದಸ್ಯರು ಮಾತ್ರ ವಲ್ಲ ಯಾವುದೇ ರಾಜಕೀಯ ಪಕ್ಷೆ, ಕಾಂಗ್ರೆಸ್ ಪಕ್ಷವಾಗಲಿ, ಜನತಾದಳ ಪಕ್ಷವಾಗಲಿ. ಬಿ.ಜೆ.ಪಿ. ಯಾಗಲಿ, ಕಮ್ಯುನಿಸ್ಟ್, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವಾಗಲೀ, ಅಥವಾ ಪಕ್ಷೇತರರಾಗಲೀ ಎಲ್ಲರೂ ಇದನ್ನು ವಿರೋಧಿಸುತ್ತಾರೆ ಅದಕ್ಕಾಗಿ ಸರ್ಕಾರ ಇದನ್ನು ಪುನರ್‌ವಿಮರ್ಶೆ ಮಾಡಬೇಕು, ಇಲ್ಲದಿದ್ದರೆ ಇದರ ಪರಿಣಾಮ ನೆಟ್ಟಗಾಗುವುದಿಲ್ಲ ಎನ್ನತಕ್ಕಂಥ ಗಂಭೀರವಾದಂಥ ಎಚ್ಚರಿಕೆಯನ್ನು ಸರ್ಕಾರಕ್ಕೆ ಕೊಡುತ್ತೇನೆ ಎನ್ನುವ ಮಾತನ್ನು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ, ನಮಸ್ಕಾರ.

†ಶ್ರೀ ಎಂ. ರಾಜಶೇಖರಮೂರ್ತಿ (ಹಣಕಾಸು ಸಚಿವರು).—ಸನ್ಮಾನ್ಯ ಅಧ್ಯಕ್ಷೆಣಿಯವರೇ, ಈ ಗವರ್ನಮೆಂಟಿನ ಸೂಚನೆ ಏನಿದೆ, ಇದು ಚರ್ಚೆಗೇ ಪ್ರಾರಂಭ ಆಗಿತ್ತು. ಬೇಡಿಕೆಮೇಲೆ ಚರ್ಚೆ ಆದಹಾಗೆ ಆಯಿತು ವಿಷಯ ಬಹಳ ಪ್ರಾಮುಖ್ಯವಾದುದರಿಂದ ಮಾನ್ಯ ಸದಸ್ಯರು ದೀರ್ಘವಾಗಿ ಚರ್ಚೆ ಮಾಡಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದು ಉತ್ತಮವಾದ, ತ್ವರಿತವಾದ ಕಾರ್ಯಕ್ರಮ ಎಂದು ಹೇಳಿ ಸೇಂದಿ ಮಾರಾಟ ನಿಷೇಧ ಮಾಡಿದ್ದನ್ನು ಇಡೀ ರಾಷ್ಟ್ರದಲ್ಲಿ ಜನ ಸ್ವಾಗತ ಮಾಡಿದ್ದಾರೆ. ಆದರೆ ಇದರಿಂದ ಕೆಲವು ಸಮಸ್ಯೆಗಳು ಉದ್ಭವಿಸಿರುವುದರಿಂದ ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಇದನ್ನೇ ಉಪ ಕುಲ ಕಸುಬಾಗಿ ಮಾಡಿಕೊಂಡಿರತಕ್ಕಂಥ ಮೂರ್ತೆದಾರರು ಏನಿದ್ದಾರೆ ಅವರಿಗೆ ತೊಂದರೆಯಾಗಿದೆ, ಅವರು ನಿರುದ್ಯೋಗಿಗಳಾಗುತ್ತಾರೆ ಎಂದು ಹೇಳಿ ಇದರ ಬಗ್ಗೆ ಮಾನ್ಯ ಸದಸ್ಯರು ಮಾತನಾಡಿ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಕೆಲವು ದಕ್ಷಿಣ ಜಿಲ್ಲೆಗೆ ಇದನ್ನು ಹೊರತಾಗಿ ಬೇಕಿಯದ್ದಕ್ಕೆ ಮಾತ್ರ ಅನ್ವಯಿಸಬೇಕು. ಇನ್ನು ಕೆಲವರು ಸೊಸೈಟಿ ಮುಖಾಂತರ ಮಾರಾಟ ಮಾಡುವುದಕ್ಕೆ ಅವಕಾಶ ಕೊಡಿ ಎಂದು ನಾನಾ ರೀತಿಯ ಸಲಹೆಗಳನ್ನು ಕೊಟ್ಟಿದ್ದಾರೆ. ಒಂದೇ ಒಂದು ಅವರ ಮನಸ್ಸಿನಲ್ಲಿ ಇರುವುದು ಏನೆಂದರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏನು ಮೂರ್ತೆದಾರರು ಇದ್ದಾರೆ, ಅವರು ನಿರುದ್ಯೋಗಿಗಳು ಆಗಬಾರದು, ಅವರು ನಿರುದ್ಯೋಗಿಗಳು ಆಗದೇ ಇರುವಹಾಗೆ ಏನೇನು ಕಾರ್ಯಕ್ರಮಗಳನ್ನು ರೂಪಿಸಬೇಕೋ ಅವುಗಳನ್ನು ರೂಪಿಸಬೇಕೆಂಬ ಸರ್ಕಾರ ಆಲೋಚನೆ ಮಾಡುತ್ತಿದೆ. ಈ ವಿಚಾರ ಮಂತ್ರಿಮಂಡಲದಲ್ಲೂ ಕೂಡ ಚರ್ಚೆಗೆ ಬಂದಿತ್ತು. ಆದು ಬಂದಮೇಲೆ ವಿಚಾರ ಬಹಳ ಪ್ರಾಮುಖ್ಯವಾದುದು ಎಂದು ಹೇಳಿ ಒಂದು ಉಪಸಮಿತಿಯನ್ನು ರಚನೆ ಮಾಡಿದ್ದೇವೆ. ಈ ಉಪಸಮಿತಿ ಎರಡು ಸಿಟ್ಟಿಂಗ್‌ಗಳನ್ನು ಮಾಡಿದೆ. ಮತ್ತೆ ಮಂಗಳವಾರ ದಿವಸ ಈ ಉಪಸಮಿತಿ ಸೇರಲಿದೆ. ಮಾನ್ಯ ಸದಸ್ಯರು ಏನೇನು ಸಲಹೆಗಳನ್ನು ಕೊಟ್ಟಿದ್ದಾರೆ, ಆ ಸಲಹೆಗಳನ್ನು ನಾನು ಉಪಸಮಿತಿಯ ಮುಂದೆ ಇಡುತ್ತೇನೆ. ಮತ್ತು ಉಪಸಮಿತಿಯ ರಿಪೋರ್ಟನ್ನು ಶೀಘ್ರದಲ್ಲಿಯೇ ಕ್ಯಾಬಿನೆಟ್ ಮುಂದೆ ತೆಗೆದುಕೊಂಡು ಹೋಗುತ್ತೇನೆ. ಇದರ ಬಗ್ಗೆ ಕ್ಯಾಬಿನೆಟ್ ಒಂದು ಆಖೈರು ತೀರ್ಮಾನವನ್ನು ಶೀಘ್ರದಲ್ಲೇ ತೆಗೆದುಕೊಳ್ಳುತ್ತದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಉಪಾಧ್ಯಕ್ಷರೆ, ನಾನು ಕೂಡ ಇದೆ ವಿಚಾರದಲ್ಲಿ ಬೇರೆ ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸ್ ಕಳುಹಿಸಿಕೊಟ್ಟಿದ್ದೆ. ಮತ್ತೆ ಇದೇ ವಿಷಯಕ್ಕಾಗಿ ಸದನದ ಸಮಯವನ್ನು ವ್ಯಯ ಮಾಡುವುದು ಬೇಡ. ನಿನ್ನೆ ನಾನು ಕಾರ್ಮಿಕ ಇಲಾಖೆಯ ಬೇಡಿಕೆಯ ಮೇಲೆ ಮಾತನಾಡುವಾಗ ಈ ವಿಷಯವನ್ನೂ ಪ್ರಸ್ತಾಪ ಮಾಡಿದ್ದೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರತಕ್ಕ ಮೂರ್ತೆದಾರರ ಜೀವನದ ಪ್ರಶ್ನೆ ಇದು. ಅಲ್ಲಿ ೧೫–೨೦ ಸಾವಿರ ಜನ ಇರಬಹುದು. ಇದಲ್ಲದೆ ಇಡೀ ರಾಜ್ಯದಲ್ಲಿ ಸುಮಾರು ೫೦ ಸಾವಿರ ಜನ ಇದರಿಂದ ಜೀವನ ಮಾಡಿಕೊಂಡಿದ್ದಾರೆ. ಇವರನ್ನೂ ಪರಿಗಣನೆಗೆ ತೆಗೆದುಕೊಳ್ಳಬೇಕು. ತಾವು ಈಗಾಗಲೇ ಮಾಡಿರತಕ್ಕ ಉಪಸಮಿತಿಯಲ್ಲಿ, ಈ ಪ್ರಶ್ನೆಯನ್ನೂ ತಂದು ಒತ್ತಾಯ ಮಾಡಬೇಕೆಂದು. ತಮ್ಮನ್ನು ಒತ್ತಾಯಿಸುತ್ತೇನೆ.

ನಿಯಮ ೫೩ಳಿರ ವೇರೆಗೆ

1. ಹಿರೇಹಳ್ಳ ಮಧ್ಯಮ ನಿ...ವರಿ ಯೋಜನೆಗೆ ಹಣ ಒದಗಿಸುವುದು

ಶ್ರೀ ಮಲ್ಲಿಕಾರ್ಜುನ ಬಸಪ್ಪ ದಿವಟರ (ಕೊಪ್ಪಳ).—ಮಾನ್ಯ ಸಭಾಧ್ಯಕ್ಷೆಣಿಯರೇ, ನನ್ನ ಕ್ಷೇತ್ರ ದಲ್ಲಿ ಬರುವ ಹಿರೇಹಳ್ಳ ಮಧ್ಯಮ ನೀರಾವರಿ ಯೋಜನೆ ೧೯೭೭ರಲ್ಲಿ ಜಾರಿಗೆ ಬಂದಿದೆ. ಈ ಯೋಜನೆಯಿಂದ ಹಿಂದುಳಿದ ಕೊಪ್ಪಳ ತಾಲ್ಲೂಕಿನ ಸುಮಾರು ೨೫,೦೦೦ ಎಕರೆ ನೀರಾವರಿ ಸೌಲಭ್ಯ ದೊರಕಲಿದೆ.

ಈಗಾಗಲೇ ಈ ಯೋಜನೆಗಾಗಿ ಸುಮಾರು ೩ ಕೋಟಿ ರೂಪಾಯಿಗಳು ರಾಜ್ಯ ಸರ್ಕಾರದಿಂದ ವಿನಿಯೋಗವಾಗಿದೆ. ಹಣಕಾಸಿನ ೧೯೯೦-೯೧ನೇ ಸಾಲಿನ ಮುಂಗಡ ಪತ್ರದಲ್ಲಿ ಈ ಯೋಜನೆಗೆ ಯಾವುದೇ ಹಣಕಾಸು ಒದಗಿಸದಿರುವುದು ದುರದೃಷ್ಟಕರ. ಸರ್ಕಾರದ ಈ ತೀರ್ಮಾನದಿಂದ ಹಿಂದುಳಿದ ನಮ್ಮ ತಾಲ್ಲೂಕಿನ ರೈತರಿಗೆ ತುಂಬಾ ನಿರಾಸೆಯಾಗಿದೆ. ನೀರಾವರಿ ಯೋಜನೆಗಳಿಗೆ ಹೆಚ್ಚಿನ ಆದ್ಯತೆ ಕೊಡುವ ಸರ್ಕಾರದ ಧೋರಣೆ ಈಡೇರುವಂತಾಗಿದೆ ಕಾರಣ ಹಿಂದುಳಿದ ಕೊಪ್ಪಳ ತಾಲ್ಲೂಕಿನ ಹಿತದೃಷ್ಟಿಯಿಂದ ಶೀಘ್ರವೇ ಹಣಕಾಸು ಒದಗಿಸಬೇಕಾಗಿ ವಿನಂತಿ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು).—ಮಾನ್ಯ ಉಪಾಧ್ಯಕ್ಷೆಯವರೆ, ಹೀರೆಹಳ್ಳ ಮಧ್ಯಮ ನೀರಾವರಿ ಯೋಜನೆ, ಕೊಪ್ಪಳ ತಾಲ್ಲೂಕಿನ ಕಿನ್ನಾಳ ಗ್ರಾಮದ ಬಳಿ ಹೀರೆಹಳ್ಳದ ಮತ್ತು ವೀರಾಪುರ ಅಡ್ಡಲಾಗಿ ಆಣೆಕಟ್ಟನ್ನು ನಿರ್ಮಿಸಿ ಎರಡು ದಂಡೆಗಳ ನಾಲೆಗಳ ಮೂಲಕ ಕೊಪ್ಪಳ ತಾಲ್ಲೂಕಿನ ೮೫೫೦ ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸುವ ಉದ್ದೇಶವಿದೆ. ಈ ಯೋಜನೆಯ ಮೂಲ ಅಂದಾಜು ೭೫-೭೬ನೇ ದರಪಟ್ಟಿಯ ಆಧಾರದ ಮೇಲೆ ೬೫೫ ಲಕ್ಷ ರೂಪಾಯಿಗಳಾಗಿದ್ದು, ಆಡಳಿತಾತ್ಮಕ ಮಂಜೂರಾತಿ ೧೯೭೯ನೇ ಮೇ ತಿಂಗಳಲ್ಲಿ ನೀಡಲಾಗಿದೆ. ಯೋಜನೆಯ ಕೆಲಸಗಳು ಪೂರ್ವಭಾವಿಯ ಹಂತದಲ್ಲಿ ಇದ್ದು ಕೆಲವು ಒಡ್ಡಿನ ಹೆಲವು ಭಾಗದಲ್ಲಿ ಕಿಟ್ಟ್ರಜ್ ಕೆಲಸಗಳು ಪ್ರಗತಿಯಲ್ಲಿದೆ. ಈ ಯೋಜನೆಯ ಕೆಲಸಗಳು ೧೯೭೭ನೇ ಸಾಲಿನಲ್ಲಿ ಪ್ರಾರಂಭವಾಗಿದ್ದರೂ ೧೯೯೦ನೇ ಮಾರ್ಚಿ ಅಂತ್ಯದವರೆಗೆ ಒಟ್ಟು ೨೬೮ ಲಕ್ಷ ರೂಪಾಯಿಗಳಷ್ಟು ವ್ಯಯ ಮಾಡಲಾಗಿದೆ. ಈ ಯೋಜನೆ ಪರಿಷ್ಕೃತ ಅಂದಾಜು ೧೯೮೮-೮೯ನೇ ದರಪಟ್ಟಿಯ ಆಧಾರದ ಮೇಲೆ ಸುಮಾರು ೪೦ ಕೋಟಿ ರೂಪಾಯಿಗಳಾಗುವುದೆಂದು ಅಂದಾಜಿಸಲಾಗಿದೆ. ರಾಜ್ಯದ ಹಣ ಸಂಪನ್ಮೂಲವನ್ನನುಸರಿಸಿ ನೀರಾವರಿ ವಿಭಾಗಕ್ಕೆ ಒದಗಿಸಲಾದ ಒಟ್ಟು ಮೊತ್ತದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ಅತ್ಯಗತ್ಯವಾಗಿ ಆದ್ಯತೆ ನೀಡಬೇಕಾಗಿದ್ದು ಹಾಗೂ ಮುಂಗಡ ಹಂತದಲ್ಲಿರುವ ಯೋಜನೆಗಳಿಗೆ ಆದ್ಯತೆ ನೀಡಬೇಕಾದ ಅಂಶ ಪರಿಗಣಿಸಿ, ಈ ಯೋಜನೆಗೆ ಅನುದಾನ ಅಗತ್ಯವಿರುವಷ್ಟು ನೀಡಲು ಸಾಧ್ಯವಾಗಿರುವುದಿಲ್ಲ. ಕೇವಲ ಟೋಕನ್ ಅನುದಾನ ನೀಡಿದಲ್ಲಿ ಸಿಬ್ಬಂದಿ ವರ್ಗಕ್ಕೆ ವ್ಯಯವಾಗುವುದೇ ಹೊರತು ಯೋಜನಾ ಕಾಮಗಾರಿಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಹಣ ಒದಗಿಸಲು ಸಾಧ್ಯವಿರುವುದಿಲ್ಲ. ಈ ಕಾರಣಗಳಿಂದಾಗಿ ಪೂರ್ವ ಬಾವಿ ಹಂತದಲ್ಲಿರುವ ಈ ಯೋಜನೆಗೆ ಆದ್ಯತೆ ನೀಡಲಾಗಿರುವುದಿಲ್ಲ. ಆರ್ಥಿಕ ಸಂಪನ್ಮೂಲದಲ್ಲಿ ಹೆಚ್ಚಳ ಕಂಡು ಬಂದಾಗ ಈ ಯೋಜನೆಯ ಕೆಲಸಗಳನ್ನು ಕೈಗೊಳ್ಳಲಾಗುವುದು.

೭. ಹಾಸನದ ಬಾಲಕರ ಹಾಗೂ ಬಾಲಕಿಯರ ಸರ್ಕಾರಿ ಪ್ರೌಢ ಶಾಲೆಯನ್ನು ಪದವಿ ಪೂರ್ವ ಕಾಲೇಜಿನ್ನಾಗಿ ಪರಿವರ್ತಿಸುವುದು.

ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ).—ಮಾನ್ಯ ಸಭಾಧ್ಯಕ್ಷೆಣಿಯರೇ, ಹಾಸನದಲ್ಲಿ ಸರ್ಕಾರಿ ಜೂನಿಯರ್ ಕಾಲೇಜುಗಳ ಸಂಖ್ಯೆ ಕಡಿಮೆ ಇದ್ದು, ಪಿ.ಯು.ಸಿ.ಗೆ ಸೇರಲು ಇಚ್ಛಿಸುವ ಎಲ್ಲಾ ವಿದ್ಯಾರ್ಥಿಗಳಿಗೂ ಸ್ಥಳಾವಕಾಶವಿಲ್ಲದೆ ತೊಂದರೆಯಾಗಿದೆ. ಖಾಸಗಿ ಕಾಲೇಜುಗಳಲ್ಲಿ ಪಿ.ಯು.ಸಿ. ತರಗತಿಗಳಿಗೆ ಸೇರಲಿಚ್ಛಿಸುವ ವಿದ್ಯಾರ್ಥಿಗಳಿಂದ ಸಾವಿರಾರು ರೂಪಾಯಿಗಳ ದೇಣಿಗೆಯನ್ನು ವಸೂಲಿ ಮಾಡುತ್ತಿದ್ದು, ಬಡ ವಿದ್ಯಾರ್ಥಿಗಳು ಈ ಖಾಸಗಿ ಪಿ.ಯು.ಸಿ. ಕಾಲೇಜಿಗೆ ಸೇರುವ ಸ್ಥಿತಿಯಲ್ಲಿಲ್ಲ. ಹಾಸನದ ಸರ್ಕಾರಿ ಬಾಲಿಕಾ ಮತ್ತು ಬಾಲಕರ ಪ್ರೌಢ ಶಾಲೆಗಳನ್ನು ಪಿ.ಯು.ಸಿ. ಕಾಲೇಜುಗಳಾಗಿ ಪರಿವರ್ತಿಸಿದರೆ, ವಿದ್ಯಾರ್ಥಿಗಳಿಗೆ ಸ್ಥಳಾವಕಾಶವಾಗಿ, ಖಾಸಗಿ ಕಾಲೇಜುಗಳಿಗೆ ದೇಣಿಗೆ ಕೊಡುವುದನ್ನು ತಪ್ಪಿಸಬಹುದು. ಈ ವಿಚಾರದಲ್ಲಿ ಮಾನ್ಯ ವಿದ್ಯಾಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ (ವಿದ್ಯಾಸಚಿವರು).—ಮಾನ್ಯ ಸಭಾಧ್ಯಕ್ಷೆಣಿಯರೇ, ಹಾಸನದಲ್ಲಿ ಸರ್ಕಾರಿ ಪದವಿಪೂರ್ವ ಕಾಲೇಜು ಇಲ್ಲದಿರುವುದು ಇಲಾಖೆಯ ಗಮನಕ್ಕೆ ಬಂದಿದ್ದು, ಹಾಸನದ ಬಾಲಕರ ಹಾಗೂ ಬಾಲಕಿಯರ ಸರ್ಕಾರಿ ಪ್ರೌಢ ಶಾಲೆಯನ್ನು ಪದವಿ ಪೂರ್ವ ಕಾಲೇಜನ್ನಾಗಿ ಪರಿವರ್ತಿಸುವ ಬಗ್ಗೆ ಮನವಿ ಬಂದಿದ್ದು, ಸದರಿ ಪ್ರೌಢ ಶಾಲೆಯನ್ನು ಪದವಿಪೂರ್ವ ಕಾಲೇಜನ್ನಾಗಿ ಪರಿವರ್ತಿಸುವ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗುತ್ತಿದೆ, ಖಾಸಗಿ ಕಾಲೇಜುಗಳಲ್ಲಿ ಪಿ.ಯು.ಸಿ. ತರಗತಿಗಳಿಗೆ ಸೇರಲಿಚ್ಛಿಸುವ ವಿದ್ಯಾರ್ಥಿಗಳಿಂದ ಸಾವಿರಾರು ರೂಪಾಯಿಗಳ ದೇಣಿಗೆಯನ್ನು ವಸೂಲಿ ಮಾಡುತ್ತಿರುವ ಬಗ್ಗೆ ಇಲಾಖೆಗೆ ದೂರು ಬಂದಿರುವುದಿಲ್ಲ.